**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 1182/2019**

**ಪಿಡಬ್ಲೂ–9**

**ಸಿಡಬ್ಲೂ–13**

| | | |
|---|---|---|
| ಸಾಕ್ಷಿದಾರರ ಹೆಸರು | – | ಷಣ್ಮುಗಂ. ಎಮ್ |
| ತಂದೆಯ ಹೆಸರು | – | ಮಣಿ |
| ವಯಸ್ಸು | – | 38 ವರ್ಷ |
| ಕೆಲಸ | – | ಪೋಲಿಸ್ ನೀರಿಕ್ಷಕರು |
| ವಾಸ | – | ಬೆಂಗಳೂರು |

**ದಿನಾಂಕ 27-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಆಗಸ್ಟ 2013 ರಿಂದ ಸೆಪ್ಟೆಂಬರ್ 2015 ವರೆಗೆ ಕೆ ಆರ್ ನಗರ ಪೊಲೀಸ್ ಠಾಣೆಯಲ್ಲಿ ಪೋಲಿಸ್ ಉಪ ನೀರಿಕ್ಷಕರಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 20.08.2014 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಸಂಜೆ 6 ಗಂಟೆಗೆ ಸದರಿ ದೂರನ್ನು ಠಾಣಾ ಮೊಕದ್ದಮೆ ಸಂಖ್ಯೆ 342/14 ಕಲಂ 380 ಮತ್ತು 457 ಐ.ಪಿ.ಸಿ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದೇನೆ. ಸಾಕ್ಷಿಯು ನಿಪಿ 1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ 9 ಎ ಎಂದು ಗುರತಿಸಲಾಯಿತು. ನಂತರ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

2. ದಿಃ 21.08.2014 ರಂದು ಚಾಸಾ 1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10 ಗಂಟೆಯಿಂದ 11

ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸ್ಥಳ ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಡಿ ಎಂದು ಗುರುತಿಸಲಾಯಿತು. ನಂತರ ಚಾಸಾ 6 ರಿಂದ 10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 26.12.2014 ರಂದು ಪ್ರಕರಣದ ಕಡತವನ್ನು ಅಪರಾಧ ವಿಭಾಗದ ಆ ಸಮಯದಲ್ಲಿ ಪಿ.ಎಸ್.ಐ ಆದ ಪ್ರಕಾಶ ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲು ಶ್ರೀ ಎಂ.ಸಿ.ಎಸ್ 1 ನೇ ಆರೋಪಿ ಪರ ವಕೀಲರು ಃ**

ನಿಪಿ 1 ನ್ನು ನೀಡಿರುವುದು ದಿಃ20.08.2014 ಎಂದರೆ ಸರಿ. ದೂರು ತಡವಾಗಿ ನೀಡಲು ಕಾರಣ ಏನು ಎಂದು ತನಿಖೆ ಮಾಡಿದ್ದೀರಾ ಎಂದರೆ ದೂರು ತಡವಾಗಿಲ್ಲ ಶಾಲೆಗೆ ಹೋಗಿ ನೋಡಿದ ಸಮಯದಲ್ಲಿ ಬಂದು ದೂರನ್ನು ನೀಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ 1 ರಲ್ಲಿ ಕಾಣುವ 50 ಕೆ.ಜಿ ಅಕ್ಕಿ ಮತ್ತು 35 ಕೆ.ಜಿ ಬೇಳೆ ಶಾಲೆಯಲ್ಲಿ ಇತ್ತು ಎಂದು ಹೇಳಲು ಶಾಲೆಯಿಂದ ದಾಖಲೆ ಪಡೆದಿದ್ದೀರಾ ಎಂದರೆ ನನ್ನ ತನಿಖಾವಧಿಯಲ್ಲಿ ನಾನು ಪಡೆದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಬೀಗ ಅಮಾನತ್ತುಪಡಿಸಿಕೊಂಡಿದ್ದೀರಾ ಎಂದರೆ ಬಾಗಿಲಿಗೆ ಇಂಟರ್ನಲ್ ಲಾಕ್ ಇದ್ದ ಕಾರಣ ಅದನ್ನು ಅಮಾನತ್ತುಪಡಿಸಿಕೊಳ್ಳಲು ಆಗುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಪಿ 2 ರಲ್ಲಿ ಉತ್ತರ ಭಾಗದ ಗೋಡೆಯ ಪಕ್ಕದಲ್ಲಿ ಕ್ರೀಡಾ ಸಾಮ್ರಾಗ್ರಿಗಳು ಮತ್ತು ಅಕ್ಕಿ ಮೂಟೇಗಳು ಇದ್ದು ಈ ಪೈಕಿ 50 ಕೆ.ಜಿ , 35 ಕೆ.ಜಿ ಬೇಳೆ ಮತ್ತು ಅದರ ಪಕ್ಕದಲ್ಲಿ ಇಟ್ಟಿದ್ದ ಒಂದು ಖಾಲಿ ಹೆಚ್.ಪಿ ಸಿಲಿಂಡರ್ ಗಳು ಕಳುವು ಆಗಿದೆ ಎಂದು ನಮೂದಿಸಿದ್ದು ಉಳಿದ ಅಕ್ಕಿ ಮತ್ತು ಬೇಳೆ ಮೂಟೆಗಳ ವಿವರಣೆ ನಿಪಿ 2 ರಲ್ಲಿ ನೀಡಿದ್ದೀರಾ ಎಂದರೆ ಅಲ್ಲಿ ಶೆಖರಿಸಿದ್ದ ಎಲ್ಲ ಅಕ್ಕಿ ಮತ್ತು ಬೇಳೆ ಮೂಟೆಗಳನ್ನು ಹಾಗೂ ಒಂದು ಖಾಲಿ ಸಿಲಿಂಡರ ಕಳುವಾಗಿದ್ದು ಸ್ಥಳದಲ್ಲಿ ಉಳಿದ ಅಕ್ಕಿ ಮತ್ತು ಬೇಳೆ ಮೂಟೆ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

2. ಹೆಚ್.ಪಿ ಖಾಲಿ ಸಿಲಿಂಡರ್ ಶಾಲೆಗೆ ಸೇರಿದೆ ಎಂದು ಹೇಳಲು ಕಷ್ಟಮರ್ ಐಡಿ ನನ್ನ ತನಿಖಾವಧಿಯಲ್ಲಿ ಪಡೆದಿಲ್ಲ. ನಿಪಿ 2 ಸ್ಥಳದಲ್ಲಿ ಬರೆದಿಲ್ಲ ಹಾಗೂ ಪಂಚರ ಸಹಿ ಪಡೆದಿಲ್ಲ, ಠಾಣೆಯಲ್ಲಿ ಬರೆದು ಪಡೆಯಲಾಗಿದೆ ಎಂದರೆ ಸರಿಯಲ್ಲ. ಚಾಸಾ 6 ರವರಿಂದ ನಾನು ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೆ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಎಲ್ಲಾ ಅಂಶಗಳು ಸುಳ್ಳಿದ್ದರೂ ಸಹ ಅದನ್ನು ಸ್ವೀಕರಿಸಿ ಸುಳ್ಳುಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಡಿ.ಸಿ.ಜಿ 2 ನೇ ಆರೋಪಿ ಪರ ವಕೀಲರು ಃ</u>**

ಬಿ.ಇ.ಒ ಕಚೇರಿಯಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ಪಡೆದಿಲ್ಲ. ಚಾಸಾ 1 ರವರೇ ನಿಪಿ 1 ರಲ್ಲಿ ಬರೆದಿರುವ ಸಾಮಾನು ದುರುಪಯೋಗಪಡಿಸಿಕೊಂಡು ಸುಳ್ಳು ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ 1 ರವರ ಸಂಪೂರ್ಣ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿ ವಕೀಲರು ಮಾಡಿರುವ ಪಾಟೀ ಸವಾಲನ್ನು 2 ನೇ ಆರೋಪಿ ಪರ ವಕೀಲರು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

<u>ಮರು ವಿಚಾರಣೆ</u> – ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ